ಫಿಜಿ, ಆಫ್ಘಾನಿಸ್ಥಾನಗಳಿಗೆ ಸಂಸರು ಹೋಗಿದ್ದರೆಂದೂ, ಅಲ್ಲಿ ಕೂಲಿಯಾಗಿ ಕೂಡ ಕೆಲಸ ಮಾಡಿದ್ದಾರೆಂದು ವರದಿ. ಇದು ದೇಶಾಂತರದ ಮಾತಾದರೆ, ಧರ್ಮಾಂತರದ ಬಗ್ಗೆಯೂ ಸಂಸರ ನಡೆ ಅಷ್ಟೇ ವಿಚಿತ್ರ. ಒಮ್ಮೆ ಮುಸ್ಲಿಂ ಮತಕ್ಕೆ, ಒಮ್ಮೆ ಕ್ರಿಶ್ಚಿಯನ್ ಮತಕ್ಕೆ, ಮಗದೊಮ್ಮೆ ಬೌದ್ಧ ಧರ್ಮದ ಬಾಗಿಲನ್ನೂ ಅವರು ಬಡಿದು ಬಂದದ್ದುಂಟಂತೆ! ಅಷ್ಟಾಗಿಯೂ, 'ತನಗೆ ಯಾವುದೇ ಧರ್ಮದಲ್ಲಿ ನಂಬಿಕೆಯಿಲ್ಲ' ಎಂದು ತಮ್ಮ ಮರಣಪತ್ರದಲ್ಲಿ ಘೋಷಿಸಿದ್ದಾರೆ ಕೂಡ. ವರ್ಣರಂಜಿತ, ರಹಸ್ಯಮಯ ಬದುಕು ಸಂಸರದು.

1919, ಆಧುನಿಕ ಕನ್ನಡ ರಂಗಭೂಮಿಯ ಬಹು ಮಹತ್ವದ ವರ್ಷವೆಂದೇ ಗುರುತಿಸಿಕೊಂಡಿದೆ. ಆ ವರ್ಷವೇ ಟಿ.ಪಿ. ಕೈಲಾಸಂ ಅವರ 'ಟೊಳ್ಳುಗಟ್ಟಿ', ಪ್ರತಿಷ್ಠಿತ ಎ.ಡಿ.ಎ. ನಾಟಕ ರಚನಾ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದು ಕನ್ನಡ ರಂಗಭೂಮಿಗೆ ಗಟ್ಟಿತನ ಒದಗಿಸಿತು. ಅದೇ ಸ್ಪರ್ಧೆಯಲ್ಲಿ ಎರಡನೆಯ ಸ್ಥಾನ ಪಡೆದ ಕೃತಿಯೇ ಸಂಸರ 'ಸುಗುಣ ಗಂಭೀರ' ನಾಟಕ. ಸಂಸರ ಸಾಹಿತ್ಯ ಸಂರಚನೆಯ ಕೌಶಲ, ಗುಣ, ಸಾಮರ್ಥ್ಯಗಳನ್ನು ಪ್ರಕಟಗೊಳಿಸಲು ಈ ಪುರಸ್ಕಾರ ಬಹುಮಟ್ಟಿಗೆ ಕಾರಣವಾಯಿತೆನ್ನಲೇಬೇಕು.

ಅವರು ರಚಿಸಿದ್ದರೆನ್ನಲಾದ ಇಪ್ಪತ್ತಮೂರು ನಾಟಕಗಳಲ್ಲಿ ಈಗ ಲಭ್ಯವಿರುವಂಥವು ಆರು ಮಾತ್ರ. 'ಬೆಟ್ಟದ ಅರಸು', 'ವಿಗಡ ವಿಕ್ರಮರಾಯ', 'ಸುಗುಣ ಗಂಭೀರ', 'ಮಂತ್ರ ಶಕ್ತಿ', 'ಬಿರುದೆಂತೆಂಬರ ಗಂಡ' ಹಾಗೂ 'ವಿಜಯ ನರಸಿಂಹ'. ಅವರು ಒಂದರ್ಥದಲ್ಲಿ, ಐತಿಹಾಸಿಕ ನಾಟಕಗಳ ಪಿತಾಮಹ.

### ಪ್ಲೇ ಈಸ್ ದಿ ಥಿಂಗ್!

ಸಂಸರ ನಾಟಕ 'ವಿಗಡ ವಿಕ್ರಮರಾಯ' 1931ರಲ್ಲಿ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮ್ಮುಖದಲ್ಲಿ ಪ್ರದರ್ಶನಗೊಂಡಿತು. ನಾಟಕ ಮುಗಿದು ಕರ್ಟನ್ ಕಾಲ್ ಸಮಯದಲ್ಲಿ, ನಾಟಕವನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಮಹಾರಾಜರು ಸಂಸರನ್ನು ಅಭಿನಂದಿಸಲು ಅಪೇಕ್ಷೆಪಟ್ಟರಂತೆ. ಆದರೆ ಸಂಸರು ನಾಪತ್ತೆ! 'ಪ್ಲೇ ಈಸ್ ದಿ ಥಿಂಗ್' (ನಾಟಕವೇ ಪ್ರಧಾನ) ಎಂದು ಹೇಳುತ್ತಾ ಸಂಸರು ಅಲ್ಲಿಂದ ಜಾಗ ಖಾಲಿ ಮಾಡಿಬಿಟ್ಟಿದ್ದರಂತೆ. ಎಷ್ಟು ದಿಟವಲ್ಲವೇ? ಇಂಥವರು ಯಾರಿದ್ದಾರೆ ಈಗ? ಕೃತಿ ಮುಖ್ಯವಲ್ಲವೇ! ಕೃತಿಕಾರ ಏನಿದ್ದರೂ ಆನಂತರ.

### ನಿಷ್ಠುರವಾದಿ ಸ್ವಾಭಿಮಾನಿ

ಒಮ್ಮೆ ಕಥೆಗಾರ ಆನಂದರು ಸಂಸರ ಭೇಟಿಗೆ ಹೋದಾಗ, ಬೀಡಿ ಸೇದುವ ಚಟವಿದ್ದ ಸಂಸರ ಕೋಣೆಯಲ್ಲಿ ಸಿಗರೇಟು ಪ್ಯಾಕ್ ಒಂದನ್ನು ಬೇಕಂತಲೇ ಬಿಟ್ಟು ಬಂದರಂತೆ. ಈ ಜಾಣ ಮರೆವನ್ನು ಗಮನಿಸಿ, ಸ್ವಾಭಿಮಾನದ ಸಂಸರು, ಮುಂದೊಮ್ಮೆ ಆನಂದರು ಬಂದಾಗ ಆ ಸಿಗರೇಟು ಪ್ಯಾಕನ್ನು ಹಿಂದಿರುಗಿಸಿ, 'ನಿಮ್ಮ ಭಿಕ್ಷೆ ನನಗೆ ಬೇಕಿಲ್ಲ' ಎಂದು ಮುಖದ ಮೇಲೆ ಹೊಡೆದಂತೆಯೇ ಹೇಳಿಬಿಟ್ಟರಂತೆ. ದುಡ್ಡಿನ ವಿಚಾರವಾಗಿಯೂ ಸಂಸರದು ಇದೇ ಧೋರಣೆ. ಸಾಲ ಕೇಳಿದಾಗ ಎದುರಿನವರು ಕಡಿಮೆ ಕೊಡಲು ಮುಂದಾದರೆ, 'ನಿನಗೆ ಯೋಗ್ಯತೆ ಇಲ್ಲದಿದ್ದರೆ ತೆಪ್ಪಗೆ ದಾರಿ ಹಿಡಿ' ಎನ್ನುತ್ತಿದ್ದರಂತೆ. ಒಂದು ವೇಳೆ ಕೇಳಿದ್ದಕ್ಕಿಂತ ಹೆಚ್ಚಿಗೆ ಕೊಡಲು ಮುಂದಾದರೆ, 'ನಿನ್ನ ಭಿಕ್ಷೆ ನನಗೆ ಬೇಕಿಲ್ಲ' ಎಂಬ ಸಿಡಿಮಿಡಿ.

### ಮತ್ತೆ ಮತ್ತೆ ಆತ್ಮಹತ್ಯಾ ಯತ್ನ

ಅಪ್ರತಿಮ ಪ್ರತಿಭಾಶಾಲಿ, ಶ್ರೇಷ್ಠ ಕೃತಿರಚನಾ ಸಾಮರ್ಥ್ಯದ ಸಂಸ, ಸ್ವಪೀಡನೆ, ದಕ್ಕದ ಮನ್ನಣೆಯಿಂದ ನೊಂದು – 'ಮನಮಿಂದು ಶೂನ್ಯಂ/ ಮನೆ ಶೂನ್ಯಂ, ಬೀಡು ಶೂನ್ಯಮಾದುದು, ಸಾಕಲಾವಣೆಶೂನ್ಯಮಾಯ್ತು' ಎಂಬ ಶ್ರೀ ಅವರ ಗದಾಯುದ್ಧ ನಾಟಕದ ಮಾತಿನಂತೆ, 'ಬಾಳಿನಲ್ಲಂತೂ ಅರ್ಥವಿಲ್ಲ; ಸಾವಿನಲ್ಲಾದರೂ ಅರ್ಥವಿರಬಹುದೇ?' ಎಂದು ಹತಾಶಭಾವಕ್ಕಿಳಿದು, ತಮ್ಮ ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಒಮ್ಮೆ ಹಾಗೂ ಮೂವತ್ತೇಳನೆಯ ವಯಸ್ಸಿನಲ್ಲಿ ಮತ್ತೊಮ್ಮೆ ಆತ್ಮಹತ್ಯೆಗೆ ಪ್ರಯತ್ನಿಸಿ ವಿಫಲರಾದರು. ಕೊನೆಗೆ ಫೆಬ್ರುವರಿ 14, 1939ರಂದು ಮೈಸೂರಿನ ಸದ್ವಿದ್ಯಾ ಪಾಠಶಾಲೆಯ ಕೋಣೆಯೊಂದರಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಅವರ ಲೇಖನಿಯಿಂದ ಹೊರಹೊಮ್ಮಬೇಕಿದ್ದ ಉತ್ತಮೋತ್ತಮ ಕೃತಿಗಳ ನಿರೀಕ್ಷೆಗೆ ಇತಿಶ್ರೀ ಹಾಡಿದರು.

ಪ್ರತಿಕ್ರಿಯಿಸಿ: feedback@sudha.co.in


ಸುಧಾ

ಯುಗಾದಿ ವಿಶೇಷಾಂಕ-2023

## ಪ್ರಬಂಧ ಸ್ಪರ್ಧೆ

ಒಂದನೇ ಬಹುಮಾನ: 10000
ಎರಡನೇ ಬಹುಮಾನ: 8000
ಮೂರನೇ ಬಹುಮಾನ: 5000

- ಪದಮಿತಿ: 1500 ಶಬ್ದಗಳು.
- ಪ್ರಬಂಧಗಳು ಪತ್ರಿಕೆ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಪ್ರಕಟಗೊಂಡಿರಬಾರದು.
- ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಅಥವಾ ಇ-ಮೇಲ್‌ನಲ್ಲಿ 'ಯುಗಾದಿ ಪ್ರಬಂಧ ಸ್ಪರ್ಧೆ–2023' ಎಂದು ನಮೂದಿಸಿ.
- ಇ-ಮೇಲ್ ಮೂಲಕ ಕಳಿಸುವವರು ನುಡಿ ಅಥವಾ ಯೂನಿಕೋಡ್‌ನಲ್ಲಿ ಕಳುಹಿಸಬಹುದು.
- ಬಹುಮಾನಿತ ರಚನೆಗಳನ್ನು ಯಾವಾಗ ಬೇಕಾದರೂ ಯಾವ ಸ್ವರೂಪದಲ್ಲಾದರೂ ಬಳಸುವ ಹಕ್ಕನ್ನು 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಕಾದಿರಿಸಿಕೊಂಡಿದೆ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

**ಕೊನೆಯ ದಿನಾಂಕ**

**ಫೆಬ್ರುವರಿ 04, 2023**

ವಿಳಾಸ:
ಸಂಪಾದಕರು
ಸುಧಾ ಯುಗಾದಿ ವಿಶೇಷಾಂಕ
ನಂ. 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು 560001

ಇ-ಮೇಲ್:
ugadi@sudha.co.in

